# ಪತ್ರಗಳಲ್ಲಿ ಕಂಡ ಕುವೆಂಪು

**ಶಿಲ್ಪಶ್ರೀ ಎಚ್.ವಿ.***

**DOI: https://doi.org/10.5281/zenodo.20614501**

**ABSTRACT**

ರಾಷ್ಟ್ರಕವಿ ಕುವೆಂಪು ಅವರು ತಮ್ಮ ಮಗ ಪೂರ್ಣಚಂದ್ರ ತೇಜಸ್ವಿಗೆ ಬರೆದ ಪತ್ರಗಳ ಹಿನ್ನೆಲೆಯಲ್ಲಿ ಅವರ ಬಹುಮುಖಿ ವ್ಯಕ್ತಿತ್ವದ ಅಪರೂಪದ ಮುಖಗಳನ್ನು ಇಲ್ಲಿ ಅನಾವರಣಗೊಳಿಸಲಾಗಿದೆ. 1955ರಿಂದ 1980ರವರೆಗೆ ಬರೆದ ಈ ಪತ್ರಗಳು ಕುವೆಂಪು ಅವರನ್ನು ಕೇವಲ ದಾರ್ಶನಿಕ ಕವಿಯಾಗಿ ಮಾತ್ರವಲ್ಲದೆ, ಕಾಳಜಿಯುಕ್ತ ತಂದೆಯಾಗಿ, ಕೌಟುಂಬಿಕ ಜವಾಬ್ದಾರಿಯುಳ್ಳ ಸಂಸಾರಸ್ಥನಾಗಿ ಹಾಗೂ ಲೌಕಿಕ ವಾಸ್ತವಗಳ ಸ್ಪಷ್ಟ ಅರಿವಿದ್ದ ಮಾರ್ಗದರ್ಶಕನಾಗಿ ಪರಿಚಯಿಸುತ್ತವೆ. ಮಗನ ವಿದ್ಯಾಭ್ಯಾಸ, ಸಾಹಿತ್ಯ ಕೃಷಿ, ತೋಟದ ನಿರ್ವಹಣೆ, ಆರ್ಥಿಕ ಶಿಸ್ತು ಹಾಗೂ ಸಮಕಾಲೀನ ಸಾಮಾಜಿಕ-ರಾಜಕೀಯ ವಿದ್ಯಮಾನಗಳ ಬಗೆಗಿನ ಅವರ ನಿಲುವುಗಳು ಇಲ್ಲಿ ದಾಖಲಾಗಿವೆ. ಕವಿಯೊಬ್ಬ ಕೇವಲ ಕಲ್ಪನಾ ಲೋಕದಲ್ಲಿ ವಿಹರಿಸದೆ, ದೈನಂದಿನ ವಾಸ್ತವ ಬದುಕಿನ ಆಗುಹೋಗುಗಳೊಂದಿಗೆ ಹೇಗೆ ನಿಕಟ ಸಂಪರ್ಕ ಹೊಂದಿರುತ್ತಾನೆ ಎಂಬುದನ್ನು ಸಾಬೀತುಪಡಿಸುವ ಈ ಅಧ್ಯಯನವು, ಕುವೆಂಪು ಅವರ ಆಂತರಿಕ ಹಾಗೂ ಲೌಕಿಕ ಬದುಕಿನ ಸುಂದರ ಸಮನ್ವಯತೆಯನ್ನು ಅತ್ಯಂತ ಆಪ್ತವಾಗಿ ಕಟ್ಟಿಕೊಡುತ್ತದೆ.

**KEYWORDS:** ಕುವೆಂಪು ಪತ್ರಗಳು, ಪೂರ್ಣಚಂದ್ರ ತೇಜಸ್ವಿ, ಬಹುಮುಖಿ ವ್ಯಕ್ತಿತ್ವ, ಕೌಟುಂಬಿಕ ಕಾಳಜಿ, ಸಾಹಿತ್ಯಕ ಮಾರ್ಗದರ್ಶನ.

* **ಡಾ. ಶಿಲ್ಪಶ್ರೀ ಎಚ್.ವಿ.,** ಸಹ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಸಾಗರ, ಮಂಡ್ಯ.

ಕುವೆಂಪು ಅವರು ಕನ್ನಡ ಸಾಹಿತ್ಯದ ಅಪ್ರತಿಮ ಪ್ರತಿಭೆ. ಅವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆಗಳು ಅಪಾರ. ಸಾಹಿತ್ಯಕವಾಗಿ, ವೈಚಾರಿಕವಾಗಿ, ಪ್ರಕೃತಿ ಉಪಾಸಕರಾಗಿ, ಆಡಳಿತಗಾರರಾಗಿ, ದಾರ್ಶನಿಕರಾಗಿ ಮೌಲಿಕವಾದ, ಮಾದರಿಯಾದ, ನವನವೋನ್ಮೇಷವೆನಿಸುವ ಕಾರ್ಯಗಳನ್ನು ಮಾಡಿದ್ದಾರೆ. ಕುವೆಂಪು ಅವರ ಬಹುಮುಖಿ ಪ್ರತಿಭೆಯನ್ನು, ದರ್ಶನವನ್ನು ಗ್ರಹಿಸುವುದಕ್ಕೆ, ಅವರಿಗೆ ಸರಿಯಾಗಿ ಸ್ಪಂದಿಸುವುದಕ್ಕೆ, ಅವರ ಸಾಹಿತ್ಯದ ಮೌಲ್ಯ ವಿವೇಚನೆಗೆ ಕನ್ನಡ ಸಾರಸ್ವತ ಲೋಕಕ್ಕೆ ಇನ್ನಷ್ಟು ಸಮಯ ಬೇಕಾಗಬಹುದು. ಕುವೆಂಪು ಹಾಗೂ ಅವರ ಸಾಹಿತ್ಯಕ್ಕೆ ಹೀಗೇ ಎಂದು ನಿರ್ದಿಷ್ಟವಾಗಿ ಹೇಳಲಾಗದಷ್ಟು ವೈವಿಧ್ಯತೆ ಇದೆ. ಹೀಗಾಗಿ ಅನೇಕ ವಿದ್ವಾಂಸರು, ವಿಮರ್ಶಕರು, ಸಹೃದಯರು ಕುವೆಂಪು ಅವರ ಸಾಹಿತ್ಯವನ್ನು ಮತ್ತೆ ಮತ್ತೆ ಎದುರುಗೊಳ್ಳುತ್ತಲೇ ಇದ್ದಾರೆ. ಅವರ ಸಾಹಿತ್ಯ ಸೃಜನೆಯ ಹಿಂದಿನ ಮನೋಗುಣವನ್ನು, ಸಂದರ್ಭಗಳನ್ನು ಅರಿಯಲು ಹಲವು ದಾರಿಗಳನ್ನು ಕಾಣಲೆತ್ನಿಸಿದ್ದಾರೆ. ಹೀಗಿದ್ದರೂ ಕುವೆಂಪು ಪೂರ್ಣವಾಗಿ ನಿಲುಕದ ನಿಲುವಿನಲ್ಲೇ ಇದ್ದಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು ಮತ್ತು ಅವರ ಬರವಣಿಗೆಯನ್ನು ಅವರ ಪತ್ರಗಳ ಮೂಲಕ ಕಾಣುವ ಪ್ರಯತ್ನ ಈ ಲೇಖನದ್ದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮೊದಲಿಗೆ ಸಾಹಿತಿಯೊಬ್ಬರ ಪತ್ರಗಳನ್ನು ಸಂಕಲಿಸಿ ಪ್ರಕಟಿಸಿದವರು ಜಿ. ಪಿ. ರಾಜರತ್ನಂ ಅವರು. ಮಂಜೇಶ್ವರ ಗೋವಿಂದ ಪೈ ಅವರ ಕೆಲವು ಪತ್ರಗಳು ಎಂಬುದು ಆ ಕೃತಿ (1971). ಅನಂತರ ಕ್ರಮವಾಗಿ ಕು. ಶಿ. ಹರಿದಾಸಭಟ್ಟರು, ಶ್ರೀನಿವಾಸ ಹಾವನೂರರು ಗೋವಿಂದ ಪೈಗಳ ಪತ್ರಗಳನ್ನು ಸಂಪಾದಿಸಿದ್ದಾರೆ. ಈ ಹಾದಿಯಲ್ಲಿ ಕನ್ನಡ ಸಾಹಿತ್ಯ ಮುನ್ನಡೆದು ಹಲವು ಸಾಹಿತಿಗಳ ಪತ್ರಗಳು ಕೃತಿಗಳಾಗಿವೆ. ಮೊದಲಿಗೆ ಕುವೆಂಪು ಅವರ ಪತ್ರಗಳನ್ನು 'ಕುವೆಂಪು ಪತ್ರಗಳು' (1974) ಎಂಬ ಹೆಸರಲ್ಲಿ ಸಂಪಾದಿಸಿದವರು ಹರಿಹರಪ್ರಿಯರು.

ಅನಂತರ ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ ಕುವೆಂಪು ಅವರ ಸಮಗ್ರ ಸಾಹಿತ್ಯದ ಎಂಟನೆಯ ಸಂಪುಟದಲ್ಲಿ ಕುವೆಂಪು ಅವರ ಪತ್ರಗಳನ್ನು ಡಾ. ಕೆ. ಸಿ. ಶಿವಾರೆಡ್ಡಿ ಅವರು ಸಂಪಾದಿಸಿದ್ದರು. ಪ್ರಸ್ತುತ ಲೇಖನಕ್ಕೆ ಈ ಕೃತಿಯನ್ನೇ ಆಕರವಾಗಿರಿಸಿಕೊಳ್ಳಲಾಗಿದೆ.

ಸಾಹಿತಿಯೊಬ್ಬರನ್ನು ತಿಳಿಯಲು ಅವರ ಬರಹದಂತೆ ಬದುಕು ಮುಖ್ಯವಾಗುತ್ತದೆ. ಇವೆರಡೂ ಒಂದಕ್ಕೊಂದು ಪೂರಕ ಹಾಗೂ ಬೆಂಬಲವಾದವು. ಇವನ್ನು ತಿಳಿಯಲು ಸಾಹಿತಿಯೊಬ್ಬರು ತಮ್ಮ ಸಮಕಾಲೀನರೊಂದಿಗೆ ನಡೆಸಿದ ಪತ್ರವ್ಯವಹಾರ ನೆರವಾಗುತ್ತದೆ. ಪತ್ರಗಳು ಕೂಡ ಸಾಹಿತಿಯ ಅಭಿವ್ಯಕ್ತಿಯೆ. ಈ ಅಭಿವ್ಯಕ್ತಿ ಅಪ್ರಯತ್ನವಾಗಿರುತ್ತದೆ ಅಷ್ಟೆ. ಆದರೆ ಆಪ್ತವಾಗಿರುತ್ತದೆ. ಸಾಹಿತಿಯೊಬ್ಬರಿಗೆ ಹೊಳೆಯುವ ಸಣ್ಣ ಪುಟ್ಟ ಅಂಶಗಳು ಇಲ್ಲಿ ದಾಖಲಾಗಿರುತ್ತವೆ. ಸಾದಾ ಸೀದಾವಾದ ಸಾಹಿತಿಯ ಬದುಕಿನ ವಿವರಗಳು ತಿಳಿಯುತ್ತವೆ. ಪತ್ರಗಳಲ್ಲಿ ಪ್ರಸ್ತಾಪವಾಗುವ ಇತರ ವ್ಯಕ್ತಿ, ಸಂದರ್ಭಗಳ ಮಾಹಿತಿ ದೊರೆಯುತ್ತದೆ. ಸಾಹಿತಿಯೊಬ್ಬರ ಇತರ ಬರಹಗಳಿಗೆ

ಪತ್ರಗಳು ಕೀಲಿಕೈಯಾಗುತ್ತವೆ. ಹೊಳಹುಗಳನ್ನು ನೀಡುತ್ತವೆ. ಇವು ಸಾಹಿತಿಯ ಮನೋಧರ್ಮದ ಅರಿವಿಗೆ, ಅವರ ಸಮಗ್ರ ದರ್ಶನಕ್ಕೆ ಸಹಾಯವಾಗುತ್ತವೆ. ಪತ್ರಗಳಿಂದ ಸಾಹಿತ್ಯ ರಚಿಸುತ್ತಲೇ ಲೌಕಿಕದೊಂದಿಗೆ ಸಾಹಿತಿಯೊಬ್ಬರು ಬೆರೆಯುತಿದ್ದ ಬಗೆಯನ್ನು ಅರಿಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಪತ್ರಗಳನ್ನು ಅಧ್ಯಯನಮಾಡಲಾಗಿದೆ.

ಕುವೆಂಪು ಅವರು ಬೇರೆ ಬೇರೆ ಸಂದರ್ಭದಲ್ಲಿ ಹಲವರಿಗೆ ಬರೆದ ಸುಮಾರು 250 ಪತ್ರಗಳಿವೆ. ಇವುಗಳಲ್ಲಿ ಕುವೆಂಪು ಅವರು ತಮ್ಮ ಮಗ ಪೂರ್ಣಚಂದ್ರ ತೇಜಸ್ವಿಗೆ ಬರೆದ ಸುಮಾರು 68 ಪತ್ರಗಳನ್ನು ಮಾತ್ರ ಇಲ್ಲಿ ತೆಗೆದುಕೊಳ್ಳಲಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರು ಕನ್ನಡದ ಪ್ರತಿಭಾವಂತ ಸಾಹಿತಿಗಳಲ್ಲಿ ಪ್ರಮುಖರಲ್ಲೊಬ್ಬರು. ಅವರು ಕುವೆಂಪು ಅವರ ಪ್ರಭಾವವನ್ನು ಪ್ರತ್ಯಕ್ಷವಾಗಿ ತಪ್ಪಿಸಿಕೊಂಡದ್ದೇ ವಿಶೇಷ. ಹೀಗಿದ್ದಲ್ಲಿ ತೇಜಸ್ವಿ ಅವರು ಶಿವಮೊಗ್ಗದಲ್ಲಿ ವಿದ್ಯಾಭ್ಯಾಸಕ್ಕೆಂದು ಹೋದಾಗಿನಿಂದ ಅಂದರೆ 1955 ರಿಂದ 1980 ರವರೆಗೂ ಕುವೆಂಪು ಅವರು ಪತ್ರ ಬರೆದಿದ್ದಾರೆ. ಮಧ್ಯೆ 1956–65 ರವರೆಗಿನ ಪತ್ರಗಳು ಇಲ್ಲ. ಈ ಸಮಯದಲ್ಲಿ ತೇಜಸ್ವಿಯವರು ಮೈಸೂರಿನಲ್ಲಿಯೇ ಇದ್ದದ್ದು ಇದಕ್ಕೆ ಕಾರಣವಿರಬಹುದು. 1980ರ ಅನಂತರ ದೂರವಾಣಿ ಇದ್ದದ್ದರಿಂದ ಪತ್ರ ವ್ಯವಹಾರ ನಿಂತಿರಬಹುದೆಂದು ಊಹಿಸಬಹುದು. ತೇಜಸ್ವಿ ಅವರು 17–18 ನೇ ವಯಸ್ಸಿನಲ್ಲಿದ್ದಾಗಿನಿಂದ ಅವರಿಗೆ 50ನೇ ವಯಸ್ಸಿನವರೆಗೆ ಕುವೆಂಪು ಅವರು ಪತ್ರ ಬರೆದಿದ್ದಾರೆ. ತೇಜಸ್ವಿ ಹರೆಯದಲ್ಲಿ ಕುವೆಂಪು ಅವರಿಗೆ 50ರ ವಯಸ್ಸು. ತಮ್ಮ 76ನೇ ವಯಸ್ಸಿನವರೆಗೂ ಕುವೆಂಪು ಮಗನೊಂದಿಗೆ ಪತ್ರದ ಒಡನಾಟದಲ್ಲಿದ್ದರು.

ಈ ಪತ್ರಗಳಲ್ಲಿ ಕುವೆಂಪು ಅವರು ತಂದೆಯಾಗಿ ತೇಜಸ್ವಿ ಅವರೊಡನೆ ಒಡನಾಡಿರುವುದನ್ನು ಗಮನಿಸುವುದು ಮುಖ್ಯ. ವಿದ್ಯಾರ್ಥಿಯಾಗಿದ್ದ ಯುವಕ ತೇಜಸ್ವಿಗೆ, ರೈತರಾದ ಸಂಸಾರಸ್ಥ, ತಂದೆಯಾದ ತೇಜಸ್ವಿಗೆ, ಬರಹಗಾರ ತೇಜಸ್ವಿಗೆ ಕುವೆಂಪು ಸ್ಪಂದಿಸಿದ್ದಾರೆ. ಕವಿಯಾಗಿ, ದಾರ್ಶನಿಕರಾಗಿ, ರಸಋಷಿಯಾಗಿ ಲೋಕಕ್ಕೆ ಪರಿಚಿತರಾದ ಕುವೆಂಪು ಅವರನ್ನು ಬೇರೆ ರೀತಿಯಲ್ಲಿ ಗ್ರಹಿಸಲು ಈ ಪತ್ರಗಳು ನೆರವಾಗುತ್ತವೆ. ಅಂದರೆ ಸಾರ್ವಜನಿಕವಾಗಿದ್ದ ಕುವೆಂಪು ವೈಯಕ್ತಿಕವಾಗಿಯೂ ಮುಖ್ಯ. ಅವರ ನಡವಳಿಕೆ, ವಿಚಾರ, ತೀರ್ಮಾನ, ವ್ಯವಹಾರ, ಸಲಹೆ, ಸಂಬಂಧ, ಬಾಂಧವ್ಯ, ಕಾಳಜಿ, ಲೋಕದ ಆಗು–ಹೋಗುಗಳಿಗೆ ನೀಡಿದ ಸ್ಪಂದನೆ, ಪ್ರತಿಕ್ರಿಯೆ ಇತ್ಯಾದಿ ವಿಚಾರಗಳು ಪ್ರಮುಖವಾದವು. ಈಗಾಗಲೇ ತೇಜಸ್ವಿ ಅವರ 'ಅಣ್ಣನ ನೆನಪು', ತಾರಿಣಿ ಚಿದಾನಂದರ 'ಮಗಳು ಕಂಡ ಕುವೆಂಪು' ಈ ಬಗೆಯ ಕುವೆಂಪು ಅವರನ್ನು ಪರಿಚಯಿಸುತ್ತವೆ. ಆದರೂ ಕುವೆಂಪು ತೇಜಸ್ವಿಯವರನ್ನು ಗ್ರಹಿಸಿದ್ದ ಬಗೆ ಹಾಗೂ ಅವರನ್ನು ಬೆಳೆಸುವಲ್ಲಿ ವಹಿಸಿದ ಕಾಳಜಿ ಮತ್ತು ವರ್ತಮಾನದ ನೋಟವನ್ನು ಮಗನೊಂದಿಗೆ ಕಂಡ ಪರಿಯನ್ನು ಇಲ್ಲಿ ತಿಳಿಯಬಹುದು.

ಕುವೆಂಪು ಅವರು ತೇಜಸ್ವಿಯವರಿಗೆ ಬರೆದ ಮೊದಲ ಪತ್ರ (ಲಭ್ಯವಿರುವುದು)

1955 ಡಿಸೆಂಬರ್ 7. ತೀರ್ಥಹಳ್ಳಿಯಲ್ಲಿ ಪಿ.ಯು.ಸಿ – ಇಂಟರ್ ಮೀಡಿಯೇಟ್ ವ್ಯಾಸಂಗ ಮಾಡುತ್ತಿದ್ದಾಗ. ತೇಜಸ್ವಿ ಅವರು ಹೇಮಾವತಿ ಅವರ ಸಹೋದರರಾದ ರತ್ನಾಕರ ಮಾವ ಹಾಗೂ ಅವರ ದೊಡ್ಡಮ್ಮ ಅವರೊಂದಿಗೆ ಚರ್ಚಿಸಿ ಯಾವುದೇ ತೀರ್ಮಾನ ತೆಗೆದುಕೊಳ್ಳುವಂತೆ ಸಲಹೆ ನೀಡಿದ್ದಾರೆ. ವಿಶೇಷವಾಗಿ ತೇಜಸ್ವಿಯವರು ಫೋಟೋಗ್ರಫಿಗಾಗಿ ತಂದೆಯವರಲ್ಲಿ ಹಣ ಕೇಳಿದಾಗ 19 ರೂಪಾಯಿಗಳನ್ನು ಕಳುಹಿಸಿ ಅದನ್ನು ವ್ಯರ್ಥವಾಗಿ ಕಳೆಯಬಾರದೆಂದು ತಿಳಿಸಿದ್ದಾರೆ. ತೇಜಸ್ವಿ ಅವರು ತಾವು ಏನೇ ಮಾಡಿದರೂ ತಂದೆಯವರಿಗೆ ತಿಳಿಸುವ, ಹೇಳಿ ಮಾಡುವ ಅಭ್ಯಾಸ ಹೊಂದಿದ್ದುದು ಇಲ್ಲಿ ಅರಿವಿಗೆ ಬರುತ್ತದೆ.

1956 ಜನವರಿ 21ರಲ್ಲಿ ಬರೆದ ಪತ್ರ ಗಮನ ಸೆಳೆಯುವಂತಹದ್ದಾಗಿದೆ. ಸಾಹಿತಿಯಾಗಲು ಬಯಸಿದ ತೇಜಸ್ವಿಗೆ ಕುವೆಂಪು ತಮ್ಮ ಸಲಹೆಗಳನ್ನು ಈ ಪತ್ರದಲ್ಲಿ ನೀಡಿದ್ದಾರೆ. ತೇಜಸ್ವಿಯವರ ಆರಂಭದ ಕವಿತೆಗಳನ್ನು ಪ್ರೀತಿಯಿಂದ, ಹೆಮ್ಮೆಯಿಂದ ಓದಿರುವ ಕುವೆಂಪು ಅವರು "ನಿನ್ನ ಕವನಗಳು ಹಸುಳೆಯ ಮೊದಲ ತೊದಲಂತೆ ಮನೋಹರವಾಗಿವೆ. ಆ ತೊದಲು ಕ್ರಮೇಣ ವಿಕಾಸವಾಗಿ ಉತ್ತಮ ಫಲ ಬಿಡಲಿ"(ಪುಟ– , 2020, ಸಂ. ಶಿವಾ ರೆಡ್ಡಿ ಕೆ. ಸಿ.) ಎಂದು ಹಾರೈಸಿದ್ದಾರೆ. ಬರೆಯುವ ಮೊದಲು ಕನ್ನಡ ಛಂದಸ್ಸಿನ ಸ್ಥೂಲ ಪರಿಚಯ ಮಾಡಿಕೊಳ್ಳಬೇಕೆಂದು, "ಸಾಹಿತ್ಯದ ಭಾಷೆಗೆ ವ್ಯಾಕರಣ ಶುದ್ಧಿ ಹೇಗೆ ಅವಶ್ಯಕವೋ ಹಾಗೆಯೇ ಕಾವ್ಯದ ಛಂದಸ್ಸಿನ ಅರಿವು ಬೇಕು, ಮೊದಮೊದಲಿಗೆ ಒಂದು ನಿಯಮಕ್ಕೆ ಒಳಗಾಗಿ ಕಲಿಯುವುದು ಮೇಲು"(ಅದೇ, ಪುಟ 519) ಎಂದು ತಿಳಿಸಿದ್ದಾರೆ.

ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ತೇಜಸ್ವಿಯವರು ಇಂಗ್ಲಿಷ್ ವಿಷಯದಲ್ಲಿ ನಪಾಸಾಗುತ್ತಿದ್ದರು. ಆದ್ದರಿಂದ ಕುವೆಂಪು ಅವರು ಮೊದಲಿಗೆ ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆದು ಪಾಸಾಗಬೇಕೆಂದು, ಪರೀಕ್ಷೆಯ ಸಮಯಕ್ಕೆ ಅಭ್ಯಾಸ ಮಾಡಬೇಕೆಂದು, ಆ ಸಂಬಂಧ ಉತ್ತರ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕೆಂದು ಮೇಲಿಂದ ಮೇಲೆ ಹೇಳಿದ್ದಾರೆ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಮೈಸೂರಿಗೆ ಬಂದರೆ ಸಾಹಿತಿಯಾಗುವುದಕ್ಕೆ ಬೇಕಾದ ಅವಕಾಶ ದೊರೆಯುತ್ತದೆಂದು, ಅಲ್ಲಿಯವರೆಗೂ ಸಾಮಾನ್ಯ ವಿದ್ಯಾರ್ಹತೆ ಗಳಿಸಬೇಕೆಂದು ಹೇಳಿದ್ದಾರೆ. ಇದು ಯಾವುದೇ ವ್ಯಕ್ತಿ ಸಾಹಿತಿಯಾಗಬೇಕಾದರು ಅಗತ್ಯವಿರುವ ಅಮೂಲ್ಯ ಸಲಹೆಯಾಗಿದೆ.

"ನೀನೇನಾದರೂ ಉತ್ತಮ ಲೇಖಕ, ಸಾಹಿತಿ, ಕವಿ, ಆಲೋಚಕ ಎಲ್ಲ ಆಗಬೇಕೆಂದು ಸಂಕಲ್ಪವಿದ್ದರೆ ಇಂಗ್ಲಿಷ್ ಭಾಷೆಯನ್ನೂ ಚೆನ್ನಾಗಿ ಕಲಿಯುವುದು ಒಳಿತು. ನನ್ನ ಇಂಗ್ಲಿಷ್ ಲೈಬ್ರರಿ ನಿನಗೆ ಜಗತ್ತಿನ ರತ್ನಗಳನ್ನೆಲ್ಲ ದಾನ ಮಾಡಬಹುದು"(ಅದೇ ಪು 521) ಎಂದು ತಿಳಿ ಹೇಳಿದ್ದಾರೆ. ಕುವೆಂಪು ಅವರಿಗೆ ಅಗಾಧ ಓದಿನ ಹರಹಿತ್ತು. ಅವರನ್ನು ಪ್ರಭಾವಿಸಿದ ವ್ಯಕ್ತಿಗಳು ಸಾಹಿತ್ಯ ಲೋಕಕ್ಕೆ ಪರಿಚಯವಿರುವುದು ಕೆಲವರು ಮಾತ್ರ. ತೇಜಸ್ವಿಯವರಿಗೆ ಹೀಗೆ ನೀಡಿದ ಸಲಹೆಯ ಬಗ್ಗೆ ಆಲೋಚಿಸಿದರೆ ಕುವೆಂಪು ಅವರ ಸಂಗ್ರಹದಲ್ಲಿದ್ದ ಅವರ ಗ್ರಂಥಗಳನ್ನು

ತಿಳಿಯುವ ಕುತೂಹಲ ಯಾರಿಗಾದರೂ ಮೂಡದೆ ಇರದು. ಜಗತ್ತಿನ ಅತ್ಯುತ್ತಮವೆಲ್ಲ ಆ ಸಂಗ್ರಹದಲ್ಲಿದೆಯೆಂಬುದು ಯಾವತ್ತಿಗೂ ಗಹನವಾದ ವಿಚಾರ.

ಈ ನಡುವೆ ತೇಜಸ್ವಿ ಅವರು 'ಶ್ರೀರಾಮಾಯಣ ದರ್ಶನಂ' ಕೃತಿ ಓದಿರುವುದಕ್ಕೆ ಮೆಚ್ಚಿ ಅದನ್ನು ಪೂರ್ಣದೃಷ್ಟಿಯಿಂದ ಓದಬೇಕೆಂದು ಸಲಹೆ ನೀಡಿದ್ದಾರೆ. ತೇಜಸ್ವಿ ಅವರಿಗಾಗಿ ಪುಸ್ತಕಗಳನ್ನು, ಪತ್ರಿಕೆಗಳನ್ನು ಕಳುಹಿಸುವ, ತೇಜಸ್ವಿ ಅವರ ಖರ್ಚಿಗೆ ಹಣ ಕಳುಹಿಸಿರುವ ವಿವರಗಳಿವೆ. ಕಳುಹಿಸಿದ ಹಣದ ವಿವರವನ್ನು ಸರಿಯಾಗಿಡುವಂತೆಯು, ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂದು ಹೇಳಿದ್ದಾರೆ.

ಸ್ಟುಡಿ ಬೇಕರ್ ಕಾರನ್ನು ಬೆಂಗಳೂರಿನಿಂದ ತರುವ ವಿಚಾರದ ಪತ್ರವು ಇದೆ. ಇದನ್ನು ಕೊಂಡ ತಕ್ಷಣವೇ ಯಾರೋ ಮಾರಲು ಹೊರಟಿದ್ದನ್ನು ತಿಳಿದ ಕುವೆಂಪು ತಮ್ಮ ಹಳೆಯ ಕಾರನ್ನು ಮಾರಿ ಈ ಕಾರನ್ನು (ಸೆಕೆಂಡ್ ಹ್ಯಾಂಡ್) ಕೊಂಡುಕೊಂಡಿದ್ದಾರೆ. ಕುವೆಂಪು ಅವರು ಬೂದು ಬಣ್ಣದ ತಮ್ಮ ಸ್ಟುಡಿ ಬೇಕರ್ ಕಾರನ್ನು ಮೈಸೂರು ನಗರದಲ್ಲಿ ಓಡಿಸುವ ವರ್ಣನೆಯನ್ನು ಹಲವರು ಪ್ರಸ್ತಾಪಿಸಿದ್ದಾರೆ. ಶ್ರೀಮತಿ ರಾಜೇಶ್ವರಿ ತೇಜಸ್ವಿ ಅವರು ಕೂಡ ಮೈಸೂರಿನಲ್ಲಿ ಓದುವಾಗ ಅದನ್ನು ನೋಡಿ 'ನೆಲದ ಮೇಲಿನ ವಿಮಾನ' ದಂತೆ ಎಂದು 'ನನ್ನ ತೇಜಸ್ವಿ' ಕೃತಿಯಲ್ಲಿ ವರ್ಣಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಈ ಹಂತದಲ್ಲಿ ಕುವೆಂಪು ಅವರು ಹರೆಯದ ಮಗನೊಡನೆ ಸ್ನೇಹಿತನಂತೆ ವರ್ತಿಸಿರುವುದು ಗಮನಾರ್ಹ. ತಮ್ಮ ಹರೆಯದ ದಿನಗಳನ್ನು ಮೈಸೂರಿನಲ್ಲಿಯೇ ಕಳೆದವರು ಕುವೆಂಪು. ಈ ಹಂತದಲ್ಲಿ ಇವರಿಗೆ ಸಿಗದ ಮಾರ್ಗದರ್ಶನ ತಮ್ಮ ಮಗನಿಗೆ ಸಿಗುವಂತೆ ವರ್ತಿಸಿದ್ದಾರೆ. ಆಶ್ಚರ್ಯವೆಂದರೆ ಕುವೆಂಪು ಅವರು ತಮ್ಮ ಓದಿಗಾಗಿ ಶಿವಮೊಗ್ಗದಿಂದ ಮೈಸೂರಿಗೆ ಬಂದು ಇಲ್ಲಿ ನೆಲೆ ನಿಂತರೆ, ತೇಜಸ್ವಿ ಅವರು ಮೈಸೂರಿನಿಂದ ಶಿವಮೊಗ್ಗೆಗೆ ಇಂಟರ್ ಮೀಡಿಯೇಟ್‌ಗಾಗಿ ಹೋದವರು ಮಲೆನಾಡಿನ ಆಕರ್ಷಣೆಯಿಂದ ಅಂತಹ ಪರಿಸರದಲ್ಲಿ ನೆಲೆ ನಿಂತರು. ಇದು ಒಂದು ರೀತಿಯಲ್ಲಿ ವಿರೋಧಾಭಾಸವೆನಿಸಿದರೂ ಪರಸ್ಪರ ಅಂತರ್ ಸಂಬಂಧ ಇರುವುದನ್ನು ಮನಗಾಣಬಹುದು. ಕುವೆಂಪು ಮತ್ತು ತೇಜಸ್ವಿ ಕನ್ನಡ ಸಾಹಿತ್ಯದ ಪ್ರಸಿದ್ಧ ಬರಹಗಾರರಾಗಿ, ಹಲವು ತಲೆಮಾರುಗಳನ್ನು ಪ್ರಭಾವಿಸುವವರಾಗಿ ಮುಖ್ಯರು. ಹಾಗೆಯೇ ಇವರ ತಂದೆ – ಮಗನ ಬಾಂಧವ್ಯವು ಕೂಡ ಮಾದರಿಯುತವಾದುದು ಎಂಬುದು ಈ ಪತ್ರಗಳಿಂದ ಮತ್ತಷ್ಟು ನಿಖರವಾಗುತ್ತದೆ.

ಈ ಹಂತದಲ್ಲಿ 1956 ರಿಂದ 1965 ರವರೆಗಿನ ಒಂಬತ್ತು ವರ್ಷಗಳ ಪತ್ರ ವ್ಯವಹಾರ ಇಲ್ಲ. ಬಹುಶಃ ತೇಜಸ್ವಿ ಅವರು ಬಿ. ಎ. ಮತ್ತು ಎಂ. ಎ. ವ್ಯಾಸಂಗಕ್ಕಾಗಿ ಮೈಸೂರಿನಲ್ಲಿಯೇ ಇದ್ದ ದಿನಗಳವು. ಪದವಿ ಪಡೆದದ್ದು, ಅನಂತರ ವೃತ್ತಿಯನ್ನಾರಿಸಿಕೊಂಡದ್ದು, ಮದುವೆಯಾದದ್ದು ಈ ಅವಧಿಯಲ್ಲಿ. ಕ್ರಮೇಣ ಅವರು ತೋಟ ಮಾಡಿ ಸಂಸಾರ ಹೂಡಿದ ಮೇಲಿಂದ ಮತ್ತೆ ಪತ್ರ ವ್ಯವಹಾರ ಆರಂಭವಾಗಿದೆ.

1965–1980 ಅವಧಿಯಲ್ಲಿ ಕುವೆಂಪು ಅವರಿಗೆ ತೇಜಸ್ವಿ ತೋಟ ಮಾಡಿದ್ದರ ಬಗ್ಗೆಯೇ ಕಾಳಜಿ. ತೋಟ ಮಾಡಲು ಹೊರಟ ತೇಜಸ್ವಿ ಅವರಿಗೆ ಸಲಹೆ ಹಾಗೂ ಎಚ್ಚರಿಕೆಗಳನ್ನೇ ನೀಡಿದ್ದಾರೆ. ತೋಟಕ್ಕೆ ರಸ್ತೆ ಹಾಕಿಸುವುದು, ಬೇಲಿ ನಿರ್ಮಿಸುವುದು, ಮಳೆ ಆಗುತ್ತಿರುವುದರ ವಿವರ ಕೇಳುವುದು, ಕಾಫಿ ಸಸಿಗಳ ಬಗ್ಗೆ ವಿಚಾರಿಸುವುದು, ತೋಟದ ಕೆಲಸಗಳನ್ನು ಸ್ವತಃ ಅಪಾಯ ತಂದುಕೊಳ್ಳುವಂತೆ ನಿರ್ವಹಿಸದೆ ಜನ ಸಿಕ್ಕರೆ ಮಾಡಿಸಬೇಕೆಂದು, ನೀರಿಗೆ ತೊಂದರೆಯಾಗದಂತೆ ಹೈಡ್ರಾಮ್ ಅನ್ನು ಸುಸ್ಥಿಯಲ್ಲಿರುವಂತೆ ನೋಡಿಕೊಳ್ಳಬೇಕೆಂದು ಪತ್ರ ಬರೆದಿದ್ದಾರೆ.

ಮೊದಲ ವರ್ಷ ನಿರೀಕ್ಷೆಗಿಂತ ಕಡಿಮೆ ಫಸಲು ಬಂದದ್ದನ್ನು ಉಲ್ಲೇಖಿಸಿ ಸಮಾಧಾನ ಹೇಳಿದ್ದಾರೆ. ಮತ್ತೊಮ್ಮೆ ಹತ್ತು ಮೂಟೆ ಆಲೂಗಡ್ಡೆ ಹಾಕಿರುವ ವಿಚಾರ ಕೇಳಿ ಸ್ವಲ್ಪ ಸ್ವಲ್ಪವೇ ಹಾಕಿ ಪ್ರಯೋಗ ಮಾಡಬೇಕೆಂದು ಸೂಚಿಸಿದ್ದಾರೆ. ಹೀಗೆ ಹಾಕಿದ್ದ ಹತ್ತು ಮೂಟೆ ಆಲೂಗಡ್ಡೆ ಎಲ್ಲ ಮಣ್ಣಿನಲ್ಲಿಯೇ ಕರಗಿ ಹೋಗಿ ಏನೇನು ಸಿಗದ ಬಗ್ಗೆ ವಿಷಾದಿಸಿದ್ದಾರೆ. ಅಕ್ಕಿ, ತರಕಾರಿ ಬೆಳೆದದ್ದನ್ನು ಮೈಸೂರಿಗೂ ಕಳುಹಿಸುತ್ತಿದ್ದ ವಿವರಗಳಿವೆ. ಒಮ್ಮೆ ಮೈಸೂರಿಗೆಂದು ಬಸ್ಸಿಗೆ ಹಾಕಿ ಕಳುಹಿಸಿದ್ದ ತರಕಾರಿ ಮೂಟೆ ನಾಲ್ಕು ದಿನಗಳ ಅನಂತರ ತಲುಪಿದ್ದು, ಸದ್ಯ ಅದು ಹೆಚ್ಚು ಹಾಳಾಗದೆ ಉಪಯೋಗಕ್ಕೆ ಬಂದದ್ದನ್ನು ಹೇಳಿದ್ದಾರೆ.

ತೇಜಸ್ವಿ ಅವರ ವ್ಯವಸಾಯಕ್ಕೆ ಬೇಕಾದ ಹಣವನ್ನು ಕುವೆಂಪು ಅವರು ಕಳುಹಿಸಿರುವ ದಾಖಲೆಗಳಿವೆ. ಆದರೆ ಅದು ಸಾಲದ ರೂಪದಲ್ಲಿದ್ದು ಅದನ್ನು ತೇಜಸ್ವಿ ಅವರು ಹಿಂತಿರುಗಿಸಬೇಕೆಂಬ ವಿಚಾರ ಗಹನವಾದುದಾಗಿದೆ. ಪವರ್ ಟಿಲ್ಲರ್, ಗೊಬ್ಬರ ತೆಗೆದುಕೊಳ್ಳುವುದಕ್ಕೆ ಹಣ ಕಳುಹಿಸಿದ್ದಾರೆ. ತೋಟಕ್ಕಾಗಿ ಖರ್ಚಾಗುವ ಹಣದ ಲೆಕ್ಕವನ್ನು ತಪ್ಪದೇ ದಾಖಲಿಸಬೇಕೆಂದು, ಬ್ಯಾಂಕಿನ ವ್ಯವಹಾರವನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕೆಂದು ಸಲಹೆ ನೀಡಿದ್ದಾರೆ.

ತೇಜಸ್ವಿ ಅವರ ಶಿಕಾರಿ ಬಗ್ಗೆ ಕುತೂಹಲಿಯಾಗಿರುತ್ತಿದ್ದ ಕುವೆಂಪು ಅವರು ಒಮ್ಮೆ ಅವರು ಕಾಡು ಕುರಿ ಹೊಡೆದಿದ್ದಾಗ ತಾನಿಲ್ಲವಲ್ಲ ಎಂದು ಬೇಸರಿಸಿದ್ದಾರೆ. ಅಂತೆಯೇ ಶಿವಮೊಗ್ಗ ಮತ್ತಿತರ ಕಡೆಗಳಲ್ಲಿ ಶಿಕಾರಿಗೆ ಹೋದ ಹಲವರು ಅನಾಹುತಕ್ಕೀಡಾದ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿ ಯಾರ ಜೊತೆಗೂ ಶಿಕಾರಿಗೆ ಹೋಗುವುದು ಬೇಡವೆಂದು, ಬೆಳೆಗಳಿಗೆ ಔಷಧಿ ಹೊಡೆಯುವಾಗ ಮೂಗು ಮುಚ್ಚಿಕೊಂಡು ಹೊಡೆಯಬೇಕೆಂದು ಎಚ್ಚರಿಸಿದ್ದಾರೆ. ತೇಜಸ್ವಿ ಅವರು ಪತ್ರ ಬರೆಯುವಾಗ ಮರೆಯದೆ ದಿನಾಂಕ ನಮೂದು ಮಾಡಬೇಕೆಂದು ನಿರಂತರವಾಗಿ ಹೇಳಿರುವ ಪತ್ರಗಳಿವೆ. ವಾರಕ್ಕೊಮ್ಮೆ ಪತ್ರ ಬರೆಯಬೇಕೆಂಬ ಬೇಡಿಕೆಯು ಇದೆ.

ಕೌಟುಂಬಿಕ ವಿವರಗಳಲ್ಲಿ ಕೋಕಿಲೋದಯ ಚೈತ್ರ ಅವರು ಇಂಜಿನಿಯರಿಂಗ್ ಮುಗಿಸಿ ಆಸ್ಟ್ರೇಲಿಯಾಗೆ ಹೋಗುವವರೆಗೆ ಪ್ರಾಸಂಗಿಕ ವಿವರಗಳಿವೆ. ಇಂದುಕಲಾ ಅವರಿಗೆ ಮದುವೆ ಗೊತ್ತಾಗಿ ಮದುವೆಗೆ ಹಾಗೂ ಅವರನ್ನು ವಿದೇಶಕ್ಕೆ ಕಳುಹಿಸಲು ಆಗುವ ಖರ್ಚು ವೆಚ್ಚಗಳ ಬಗ್ಗೆ ತೇಜಸ್ವಿ ಅವರೊಂದಿಗೆ ಚರ್ಚಿಸಿದ್ದಾರೆ. ಹೇಮಾವತಿ

ಅವರು ಪದೇ ಪದೇ ಅನಾರೋಗ್ಯಕ್ಕೀಡಾಗುವ, ಚಿಕಿತ್ಸೆ ಕೊಡಿಸುವ ವಿವರಗಳನ್ನು ಹಂಚಿಕೊಂಡಿದ್ದಾರೆ. ತೇಜಸ್ವಿ ಅವರೂ ಮತ್ತೆ ಮತ್ತೆ ಅನಾರೋಗ್ಯಕ್ಕೀಡಾದಾಗ ಹೆಚ್ಚು ಹೆಚ್ಚು ತರಕಾರಿಗಳನ್ನು ಉಪಯೋಗಿಸುವಂತೆ ಸೂಚಿಸಿದ್ದಾರೆ.

ಮನೆಗೆ ತಂದ ನಾಯಿಮರಿಗಳ ವಿಚಾರದಿಂದ, ಓದಲು ಬಂದ ನೆಂಟರ ಮಕ್ಕಳು, ಗಣಪತಿ ವಿಸರ್ಜನೆ, ಮನೆಯ ಹಳೆಯ ಮರದ ಸಾಮಗ್ರಿಗಳ ಮಾರಾಟ, ಊಟದ ಮೇಜನ್ನು ಮಾನಸ ಗಂಗೋತ್ರಿಯ ಕೆಫೆಟೇರಿಯದ ಮೇಜಿನಂತೆ ಮಾಡಿಸಿದ್ದು, ಕಾಫಿ ಗಿಡಗಳು ಹೂ ಬಿಡುವ ಸಮಯಕ್ಕೆ ತಮ್ಮನ್ನು ಕರೆಸಿಕೊಳ್ಳುವ, ಕಾಫಿತೋಟದಲ್ಲಿ ತೆಗೆದ ಫೋಟೋಗಳು, ಮೂಡಿಗೆರೆಯ ಜೇನನ್ನು ಕಳುಹಿಸಬೇಕೆಂದು, ಮನೆಯಲ್ಲಿ ಹೆಚ್ಚುವರಿಯಾಗಿ ಎರಡು ಕೊಠಡಿಗಳನ್ನು ನಿರ್ಮಿಸಿದ್ದು, ತೋಟದಿಂದ ಮೈಸೂರಿಗೆ ಸ್ಕೂಟರಿನಲ್ಲಿ ಓಡಾಡುವುದು ಅಪಾಯಕಾರಿಯೆಂದು, ಪ್ರತಿ ಬಾರಿಯೂ ರಾಜೇಶ್ವರಿ ಅವರನ್ನು ಜೋಪಾನವಾಗಿ ಕರೆತರಬೇಕೆಂದು, ತೇಜಸ್ವಿ ಜೀಪು ಕೊಂಡದ್ದು, ರಾಜೇಶ್ವರಿ ತೇಜಸ್ವಿ ಅವರು ತಾಯಿಯಾದಾಗ ಜೋಪಾನ ಮಾಡಬೇಕೆಂದು, ಬಾಣಂತನಕ್ಕೆ ಮೈಸೂರಿಗೆ ಕಳುಹಿಸಬೇಕೆಂದು, ಮೊಮ್ಮಕ್ಕಳಾದ ಸುಸ್ಮಿತ, ಈಶಾನ್ಯೆಯರ ಕುಶಲೋಪರಿ ಕೇಳುವುದು, ಸುಸ್ಮಿತಾ ಜಿ. ಎಚ್. ನಾಯಕರ ಮನೆಯಲ್ಲಿದ್ದಾಗ ವಾರಾಂತ್ಯದಲ್ಲಿ ಅವರನ್ನು ಕರೆಯಿಸಿಕೊಳ್ಳುತ್ತಿದ್ದ ವಿವರ, ಈಶಾನ್ಯೆಯ ಹೆಸರನ್ನು ತೈಜಸಿ ಎಂದು ಕರೆದಿರುವ ಮಾಹಿತಿ, 1980ರಲ್ಲಿ ತೇಜಸ್ವಿ ಅವರು ದೂರವಾಣಿ ಸಂಪರ್ಕ ಪಡೆಯುವ ವಿಚಾರ..... ಹೀಗೆ ಹತ್ತು ಹಲವು ವಿಚಾರಗಳನ್ನು ಪತ್ರಗಳಲ್ಲಿ ಬರೆದಿದ್ದಾರೆ.

ಲೋಕದ ವ್ಯವಹಾರಗಳನ್ನು ಕುರಿತು ಹೇಳುವುದಾದರೆ ತೀ. ನಂ. ಶ್ರೀಕಂಠಯ್ಯ ಅವರು ಕಲ್ಕತ್ತೆಯಲ್ಲಿ ತೀರಿಕೊಂಡದ್ದನ್ನು (1966) ತೇಜಸ್ವಿಯವರಿಗೆ ತಿಳಿಸುತ್ತಾ "ಕನ್ನಡದ ವಿದ್ವತ್ ಪ್ರಪಂಚಕ್ಕೆ ಅವರು ಸಲ್ಲಿಸಬಹುದಾದ ಕೆಲಸ ಇನ್ನು ಬಹಳ ಇತ್ತು!"(ಪುಟ 529 ಅದೇ) ಎಂದು ವಿಷಾದಿಸಿದ್ದಾರೆ.

ತೇಜಸ್ವಿ ಅವರ 'ಯಮಳ ಪ್ರಶ್ನೆ' ನಾಟಕವನ್ನು ಮೈಸೂರಿನ ಶತಮಾನೋತ್ಸವ ಭವನದಲ್ಲಿ ಲೇಖಕರ ಸಮ್ಮೇಳನದಲ್ಲಿ ಆಡಿರುವ ಮಾಹಿತಿ ನೀಡಿ ಚೆನ್ನಾಗಾಯ್ತೆಂದು ಪ್ರತಿಕ್ರಿಯಿಸಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ಸನ್ (1968) ಅವರ ಭಾಷಣವನ್ನು ಪ್ರಸ್ತಾಪಿಸಿ "ಅಂತೂ ಜಗತ್ತಿಗೆ ಶಾಂತಿ ಬರುವ ಮುನ್ಸೂಚನೆ ಎಂದೇ ತೋರುತ್ತದೆ ಅಲ್ಲವೇ"(ಪು 549, ಅದೇ) ಎಂದಿದ್ದಾರೆ.

ಶ್ರೀರಾಮಾಯಣ ದರ್ಶನಂ ಕೃತಿಯ 25 ರೂಪಾಯಿಯ 3000 ಪ್ರತಿಗಳು ಹೊಸ ಮುದ್ರಣ ಆಗುತ್ತಿರುವ ವಿಚಾರ ತಿಳಿಸಿ ಅದರ ಮುಖಪುಟ ಚಿತ್ರವನ್ನು ಡಾ. ಕೆ. ಬಿ. ರಾಮಕೃಷ್ಣ ಅವರು ಚಿತ್ರಿಸಿರುವ ಮಾಹಿತಿ ನೀಡಿದ್ದಾರೆ. ಹಾಗೆಯೇ ವಯಸ್ಕರ ಶಿಕ್ಷಣ ಸಮಿತಿಯವರು ಮಲೆಗಳಲ್ಲಿ ಮದುಮಗಳು ಕಾದಂಬರಿಯ 1300 ಪ್ರತಿಗಳು ಬೇಕೆಂದು ಕೇಳಿರುವುದನ್ನು ಹೇಳಿದ್ದಾರೆ.

ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಘೋಷಣೆ ಆದಮೇಲೆ ದೆಹಲಿಯಿಂದ ಕುವೆಂಪು ಅವರಿಗೆ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಆಗಮಿಸಬೇಕೆಂಬ ಆಹ್ವಾನ ಬಂದಿರುವುದನ್ನು, ಇವರು ದೆಹಲಿಗೆ ಹೋಗುವುದಿಲ್ಲವೆಂದು ನಿರ್ಧರಿಸುವುದನ್ನು ತಿಳಿಸಿದ್ದಾರೆ. ಕ್ರಮೇಣ ಕುವೆಂಪು ಅವರು ದೆಹಲಿಗೆ ಪ್ರಶಸ್ತಿ ಸಮಾರಂಭಕ್ಕೆ ಹೋಗುತ್ತಿರುವುದನ್ನು ಹೇಳಿದ್ದಾರೆ.

ಪ್ರಶಸ್ತಿ ಸಂದ ಮೇಲೆ ನಡೆದ ಅಭಿನಂದನಾ ಕಾರ್ಯಕ್ರಮಗಳ ವಿವರಗಳನ್ನು, ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕುವೆಂಪು ಅವರ ಅರ್ಧಾಕೃತಿಯ ಕಂಚಿನ ವಿಗ್ರಹ ಸ್ಥಾಪಿಸಿದ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಚದುರಂಗ ಅವರು ಕುವೆಂಪು ಅವರನ್ನು ಕುರಿತು ಕುಪ್ಪಳಿಯಲ್ಲಿ ಸಾಕ್ಷ್ಯಚಿತ್ರಕ್ಕಾಗಿ ಚಿತ್ರೀಕರಿಸುವ ಸುದ್ದಿಯನ್ನು ನೀಡಿದ್ದಾರೆ.

1971ರ ಸಮಯದಲ್ಲಿ ತೇಜಸ್ವಿಯವರು ಯಾವುದೇ ಚುನಾವಣೆಯ ವಿಚಾರದಲ್ಲಿ ಭಾಗಿಯಾಗಬಾರದೆಂದು ಅದೊಂದು ಉಸುಕು ಎಂದು ಎಚ್ಚರಿಸಿದ್ದಾರೆ. 1972 ರಲ್ಲಿ ಸಮಾಜವಾದಿ ಪಕ್ಷದವರು ವಿಧಾನಸಭೆಯಲ್ಲಿ ಕನ್ನಡದ ಗಮನ ಸೆಳೆದು ಗಲಭೆ ಎಬ್ಬಿಸಿದ ವಿಚಾರವನ್ನು ಮೆಚ್ಚಿ ಸರ್ಕಾರ ಇನ್ನೂ ಮುಂದಾದರೂ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಲು ಯೋಚಿಸುವರೇನೋ ಎಂದು ಚಿಂತಿಸಿದ್ದಾರೆ.

ಯುವಕರನ್ನು ಉದ್ದೇಶಿಸಿ ತಾವು ಭಾಷಣ ಮಾಡಬೇಕೆಂದು ಹಾರುವರೊಡ್ಡಿದ ಬೋನಿನಿಂದ ಯುವಕರು ಹೊರಬರುವಂತೆ, ಅವರ ಕಪಟತನಕ್ಕೆ ಮರುಳಾಗದೆ ಜ್ಞಾನೋದಯವಾಗುವಂತೆ ಎಚ್ಚರಿಸಲು ಭಾಷಣ ಮಾಡಬೇಕೆಂದು ಇಚ್ಛಿಸಿರುವುದನ್ನು ಪ್ರಸ್ತಾಪಿಸಿದ್ದಾರೆ. ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಖಂಡಿಸಿದ್ದಾರೆ.

ಹೀಗೆ ದಾಖಲಿಸುತ್ತಾ ಹೋದಂತೆ ತಮ್ಮ ಮಗನಾದ ತೇಜಸ್ವಿ ಅವರಿಗೆ ಕುವೆಂಪು ಅವರು ಸತತವಾಗಿ ಬರೆದಿರುವ ಪತ್ರಗಳಲ್ಲಿನ ಮಾಹಿತಿ ವಿಸ್ತರಿಸುತ್ತಲೇ ಹೋಗುತ್ತದೆ. ಈ ಮೇಲಿನ ಎಲ್ಲಾ ವಿಚಾರಗಳಿಂದ ಕುವೆಂಪು ಅವರ ವ್ಯಕ್ತಿತ್ವ ಬಹಳ ಆಪ್ತವಾಗಿರುವುದು ನಿರ್ವಚನವಾಗುತ್ತದೆ. ತೇಜಸ್ವಿ ಅವರು ವಿದ್ಯಾರ್ಥಿ ಆದಾಗಿನಿಂದ ಅವರು ಎರಡು ಮಕ್ಕಳ ತಂದೆಯಾಗುವವರೆಗೂ ಪತ್ರ ಬರೆದಿರುವ ಕುವೆಂಪು ಅಪ್ಪಟ ಒಬ್ಬ ಆಪ್ತ ಕಾಳಜಿಯ ತಂದೆಯಾಗಿಯೇ ಗೋಚರಿಸಿದ್ದಾರೆ. ದೂರದಲ್ಲಿ ಕಾಣದೆ ಒಬ್ಬಂಟಿಯಾಗಿ ಪ್ರಾಯೋಗಿಕವಾಗಿ ಬದುಕುತ್ತಿದ್ದ ತಮ್ಮ ಮಗ ಹಾಗೂ ಅವರ ಸಂಸಾರದ ಬಗ್ಗೆ ಸದಾ ಕಾಳಜಿಯ ಕಣ್ಣಿಟ್ಟು ಅವರನ್ನು ರಕ್ಷಿಸುವ, ಎಚ್ಚರಿಸುವ, ಅವರ ಏಳಿಗೆಗೆ ಪ್ರಾರ್ಥಿಸುವ ಮುಗ್ಧ ಪೋಷಕರಾಗಿ ಕಾಣುವುದು ವಿಶೇಷ.

ಅಷ್ಟು ಮಾತ್ರವಲ್ಲದೆ ತೇಜಸ್ವಿ ಅವರು ಬರಹಗಾರನಾಗಲು ಬಯಸುವುದಾದರೆ ತಮ್ಮಿಂದ ಒದಗುವ ನೆರವನ್ನು ತಿಳಿಸಿ, ಬರಹಗಾರನಾಗಲು ಬೇಕಿರುವ ಗುಣ ಹಾಗೂ ಅರ್ಹತೆಗಳನ್ನು ತಿಳಿಸಿರುವುದು ಗಂಭೀರ ವಿಚಾರ. ಇದು ತೇಜಸ್ವಿ ಅವರಿಗೆ ಮಾತ್ರವಲ್ಲದೆ ಬರಹಗಾರನಾಗ ಬಯಸುವ ಯಾರಿಗಾದರೂ ಅನ್ವಯಿಸುವ

ವಿಚಾರವಾಗುತ್ತದೆ. 'ಲಿಂಗಬಂದ' ಕತೆಗೆ ಪ್ರಜಾವಾಣಿಯ ಕಥಾ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಬಂದಾಗ ಲೋಕವೆಲ್ಲ ಇದನ್ನು ತಂದೆ ಕುವೆಂಪು ಮಗನಿಗೆ ಬರೆದು ಕೊಟ್ಟಿದ್ದಾರೆ ಎಂಬ ವದಂತಿ ಹಬ್ಬಿತ್ತಂತೆ. ಆದರೆ ಈ ವಿಚಾರವನ್ನು ಸರಿಯಾಗಿ ಗ್ರಹಿಸಿದರೆ ಕುವೆಂಪು ಮತ್ತು ತೇಜಸ್ವಿ ಅಂತಹ ಕಾರ್ಯದಿಂದ ಎಷ್ಟು ದೂರವಿದ್ದಿರಬಹುದೆಂಬ ಅಂದಾಜು ನಮಗೆ ದೊರಕುತ್ತದೆ.

ಲೋಕದಲ್ಲಿ ತಮ್ಮ ಸಮಕಾಲದಲ್ಲಿ ಜರುಗುತ್ತಿದ್ದ ವಿಚಾರಗಳಿಗೆಲ್ಲ ಕುವೆಂಪು ಕಿವಿಯಾಗುತ್ತಿದ್ದ ಬಗೆ ಹಾಗೂ ಅದನ್ನು ಮಗನೊಂದಿಗೆ ಹಂಚಿಕೊಂಡು ತಮ್ಮ ಅಭಿಪ್ರಾಯ ತಿಳಿಸುವ ವೈಖರಿಯು ಕವಿಯೊಬ್ಬರ ಸಾಮಾಜಿಕ ಹೊಣೆಗಾರಿಕೆ ಹೇಗಿತ್ತೆಂಬುದನ್ನು ಸಾಕ್ಷೀಕರಿಸುತ್ತದೆ.

ಈ ಪತ್ರಗಳಲ್ಲಿ ಗಮನಿಸಬೇಕಾದ ಮತ್ತೊಂದು ವಿಚಾರವೆಂದರೆ ಕುವೆಂಪು ಅವರ ವ್ಯವಹಾರ ಕೌಶಲ. ಪ್ರತಿ ಖರ್ಚು-ವೆಚ್ಚವನ್ನು ನಿರ್ಲಕ್ಷಿಸದೆ ದಾಖಲಿಸಿ ಮನೆಯ ವ್ಯವಹಾರವನ್ನು ತೂಗಿಸಿರುವುದು. ತೇಜಸ್ವಿ ಅವರಿಗಂತು ಕುವೆಂಪು ಅವರು ಹಣಕಾಸಿನ ನಿರ್ವಹಣೆಯನ್ನು ಜೋಪಾನವಾಗಿ ಮಾಡಬೇಕೆಂದು, ದಾಖಲಿಸಬೇಕೆಂದು ಹೇಳುತ್ತಲೇ ಬರುತ್ತಾರೆ. ಕೆಲವು ಪತ್ರಗಳಲ್ಲಿ ಹಣಕಾಸಿನ ವಿವರ ಇರುವ ಪತ್ರಗಳನ್ನು ಓದಿ ಹರಿದು ಹಾಕಬೇಕೆಂದು ಸೂಚಿಸುತ್ತಾರೆ. ರತ್ನಾಕರ ಅವರಲ್ಲಿ 25000 ರೂಪಾಯಿಗಳನ್ನು ಸಾಲ ಪಡೆದಿದ್ದ ವಿಚಾರ ತಿಳಿಸಿ, ಆ ಹಣವನ್ನು ಜ್ಞಾನಪೀಠ ಪ್ರಶಸ್ತಿ ಬಂದ ಹಣದಲ್ಲಿ ವಾಪಸ್ಸು ಮಾಡಬಹುದೆಂಬ ನಿರ್ಣಯವನ್ನು ತೇಜಸ್ವಿ ಅವರಲ್ಲಿ ಹೇಳಿದ್ದಾರೆ, ಇದು ಎಷ್ಟು ಮುಖ್ಯವೆಂದರೆ ದಾರ್ಶನಿಕ ಕವಿಯಾದ ಕುವೆಂಪು ಅವರು ಸದಾ ತಮ್ಮದೇ ಭಾವನಾ ಲೋಕದಲ್ಲಿ ಮುಳುಗಿದ್ದರೆಂಬ ಸಾಮಾನ್ಯರ ಅಭಿಪ್ರಾಯಕ್ಕೆ ತಣ್ಣೀರೆರಚುವಂತಹದ್ದು. ಏಕೆಂದರೆ ಕವಿಯಾದ ಕುವೆಂಪು ಅವರು ಶೈಕ್ಷಣಿಕವಾಗಿ ಎಲ್ಲ ಹುದ್ದೆಗಳನ್ನು ಅಲಂಕರಿಸಿದವರು. ಸಂಸಾರಸ್ಥರಾಗಿದ್ದವರು. ಈ ಜವಾಬ್ದಾರಿಗಳಿಂದ ಇವರು ನುಣುಚಿಕೊಳ್ಳದೆ ಆಡಳಿತ ಮತ್ತು ಸಂಸಾರದ ಎಲ್ಲ ಆಗು ಹೋಗುಗಳಿಗೆ ಸ್ಪಂದಿಸಿರುವುದೇ ಗಮನಾರ್ಹ ಸಂಗತಿ. ತಮ್ಮ ಹಿರಿಯ ಮಗನೊಂದಿಗೆ ಕುವೆಂಪು ಯಾವುದನ್ನೂ ಮುಚ್ಚಿಡದೇ ಎಲ್ಲವನ್ನೂ ತಿಳಿಸಿ ಸಲಹೆ, ಅಭಿಪ್ರಾಯ, ನಿರ್ಣಯಗಳನ್ನು ಹೇಳಿರುವುದು ತಂದೆ ಮಕ್ಕಳು ನಡುವಿನ ಸಂಬಂಧದ ಅರ್ಥವನ್ನು ತಿಳಿಸುತ್ತದೆ. ಹಾಗೆಯೇ ತೇಜಸ್ವಿ ಅವರು ಇದಕ್ಕೆ ಸ್ಪಂದಿಸಿರುವುದು ಮುಖ್ಯ. ಕೆಲವೊಮ್ಮೆ ತೇಜಸ್ವಿ ಅವರು ಕುವೆಂಪು ಅವರಿಗೆ ಪತ್ರ ಬರೆಯುವುದು ತಡವಾದಾಗ ಕುವೆಂಪು ಅವರೇ ಪತ್ರ ಹಾಕಿ ವಾರಕ್ಕೊಮ್ಮೆ ಕಡ್ಡಾಯವಾಗಿ ಪತ್ರ ಬರೆಯಲೇಬೇಕೆಂದು ಹಾಗೂ ಪತ್ರಕ್ಕೆ ದಿನಾಂಕವನ್ನು ಬರೆಯಬೇಕೆಂದು ಹೇಳುವುದು ಯಾವುದೇ ತಂದೆ ಮಕ್ಕಳಿಂದ ಬಯಸುವ ಪ್ರೀತಿ ಕಾಳಜಿಯನ್ನು ಇವರೂ ಬಯಸಿರುವುದು ಕಂಡುಬರುತ್ತದೆ.

ಕುವೆಂಪು ಅವರೇ ಒಮ್ಮೆ ತಮ್ಮ ಮಗಳಾದ ತಾರಿಣಿ ಅವರೊಂದಿಗೆ ತಮ್ಮ ಪತ್ರಗಳ ಬಗ್ಗೆ ಹೀಗೆಂದಿದ್ದರಂತೆ– "..ಮುಂದೆ ನೂರು ಇನ್ನೂರು ವರ್ಷಗಳ ನಂತರ

ಇವುಗಳಿಗೆ ಮಹತ್ವವಿದೆ. ಒಬ್ಬ ಮಹಾಕವಿಯ ಮೇಲೆ ರಿಸರ್ಚ್ ಮಾಡುವಾಗ ಇವೆಲ್ಲಾ ಅಗತ್ಯವಾಗುತ್ತವೆ. ಕವಿಯ ಜೀವನ ಹೇಗಿತ್ತು? ಎಂದು ತಿಳಿಯಲು ಸಹಾಯಕವಾಗುತ್ತವೆ. ಮಹಾಕವಿಯಾದಾಗ ಬರಿಯ ಕಾವ್ಯ ಬರೆಯುತ್ತಾ ಇದ್ದ ಎಂದು ಅನೇಕರು ಭಾವಿಸುವರು. ಅವರಿಗೆ ಕವಿ ಹೇಗೆ ಜನರೊಂದಿಗೆ, ಜನಜೀವನದೊಂದಿಗೆ ಬೆರೆತಿರುವನು ಎಂಬುದು ಈ ಪತ್ರಗಳಿಂದ ತಿಳಿಯುವುದು...'' (ಪುಟ 270, 2006,ತಾರಿಣಿ ಚಿದಾನಂದ) ಎಂದು.

ಇವೆಲ್ಲವನ್ನು ಸಂಗ್ರಹಿಸಿ ಹೇಳುವುದಾದರೆ ಮಹಾಕವಿಯೊಬ್ಬರು ತಮ್ಮ ಬದುಕಿನಲ್ಲಿ ಸದಾ ಕಾವ್ಯದ ಲೋಕದಲ್ಲಿಯೇ ಇರದೆ ಲೌಕಿಕವಾಗಿಯೂ ತೊಡಗಿಕೊಂಡಿದ್ದರೆಂಬ ನಿಲುವು ಅರಿವಿಗೆ ಬರುತ್ತದೆ. ತಂದೆಯಾದ ಕುವೆಂಪು ಅವರ ಈ ನಡೆ ಮಗನಾದ ತೇಜಸ್ವಿ ಅವರ ಬದುಕನ್ನು ಪ್ರಭಾವಿಸಿರುವ ಪರಿಯು ಗೋಚರಿಸುತ್ತದೆ. ಕುವೆಂಪು ಅವರು ತಮ್ಮದೇ ಕಲ್ಪನಾ ಲೋಕದಲ್ಲಿ ಇರದೆ ವಾಸ್ತವ ಬದುಕನ್ನು ಬದುಕಿದ್ದರೆಂಬುದು, ಆ ಬದುಕಿನಿಂದಲೇ ತಮ್ಮ ಸಾಹಿತ್ಯವನ್ನು ಸೃಜಿಸಿದರೆಂಬುದು ಈ ಪತ್ರಗಳಿಂದ ಮನನವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಹರಿಹರಪ್ರಿಯ, (1979), ಕುವೆಂಪು ಒಲವು ನಿಲುವು, ಬೆಂಗಳೂರು: ಬಯಲು ಪರಿಷತ್ತು.
2. ರಾಜೇಶ್ವರಿ ತೇಜಸ್ವಿ, (2011), ನನ್ನ ತೇಜಸ್ವಿ, ಮೈಸೂರು: ಪುಸ್ತಕ ಪ್ರಕಾಶನ.
3. ಶಿವಾ ರೆಡ್ಡಿ ಕೆ. ಸಿ., (2020), ಕುವೆಂಪು ಸಮಗ್ರ ಗದ್ಯ ಸಂಪುಟ 8, ಹಂಪಿ: ಕನ್ನಡ ವಿ. ವಿ.
4. ತಾರಿಣಿ ಚಿದಾನಂದ, (2006), ಮಗಳು ಕಂಡ ಕುವೆಂಪು, ಮೈಸೂರು: ಪುಸ್ತಕ ಪ್ರಕಾಶನ.